AUGUST 11, 2025

# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

- **ಇಂದಿನಿಂದ 22ರ ವರೆಗೆ,** ವಿಧಾನಮಂಡಲದ ಮುಂಗಾರು ಅಧಿವೇಶನ; 24ಕ್ಕೂ ಹೆಚ್ಚು ಮಸೂದೆಗಳ ಮಂಡನೆ.
- **ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡದ** ಖಣಗಳಿಗೆ, ಭೌಗೋಳಿಕ ಸೂಚ್ಯಂಕ ಮಾನ್ಯತೆ.
- **ವರದಾ ಹಾಗೂ ಬೇಡ್ತಿ ನದಿ ಜೋಡಣೆ** ಯೋಜನೆ; ಕಾರ್ಯಸಾಧ್ಯತೆ ವರದಿ ಸಿದ್ಧ.
- **'ನಿಪುಣ ಕರ್ನಾಟಕ' ಯೋಜನೆ;** 'ಸ್ಟೆಮ್' ಅಭ್ಯರ್ಥಿಗಳಿಗೆ, ಕಲಬುರಗಿಯಲ್ಲಿ, ಕೌಶಲ ಪರೀಕ್ಷೆ.

<><><>

**ಈಗ ವಾರ್ತೆಗಳ ವಿವರ**

<><><>

**ಇಂದಿನಿಂದ, ರಾಜ್ಯ ವಿಧಾನಮಂಡಲದ ಮುಂಗಾರು ಅಧಿವೇಶನ,**ಆರಂಭವಾಗಲಿದೆ. ಈ ತಿಂಗಳ 22ರ ವರೆಗೆ, ಸಮಾವೇಶ ಗೊಳ್ಳಲಿದ್ದು, ಈ ಅವಧಿಯಲ್ಲಿ, 24ಕ್ಕೂ ಹೆಚ್ಚು ಮಸೂದೆಗಳು ಮಂಡನೆಯಾಗುವ ನಿರೀಕ್ಷೆ ಇದೆ. ಮಸೂದೆಗಳಿಗೆ ಸರ್ವಾನುಮತದ ಅನುಮೋದನೆ ಪಡೆಯಲು, ರಾಜ್ಯ ಸರ್ಕಾರ ಸಿದ್ಧತೆ ಕೈಗೊಂಡಿದೆ. ವಿಧಾನಮಂಡಲ ಅಧಿವೇಶನ ಆರಂಭವಾದ ಬಳಿಕ, ಸ್ವಾತಂತ್ರ್ಯ ದಿನ ಸೇರಿ, 3 ದಿನಗಳ ರಜೆ ದೊರೆಯಲಿದ್ದು, 9 ದಿನಗಳ ಕಾಲ ಮಾತ್ರ ಕಲಾಪ ನಡೆಯಲಿದೆ.

<><><>

**ವಿಪಕ್ಷಗಳು, ಈ ಅವಧಿಯಲ್ಲಿ,** ಸದನದ ನಿಗದಿತ ಕಾರ್ಯ ಕಲಾಪ ಸೇರಿದಂತೆ, ರಸಗೊಬ್ಬರ ಕೊರತೆ, ಅನುದಾನ ತಾರತಮ್ಯ, ಸ್ಮಾರ್ಟ್ ಮೀಟರ್ ಕಡ್ಡಾಯ ವಿವಾದ ಮೊದಲಾದ ಹತ್ತು ಹಲವು ವಿಷಯಗಳನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಿ, ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು, ಸಹ ಸಜ್ಜಾಗಿವೆ.

<><><>

**ಇಂದು ಸಂಜೆ 7:45 ಕ್ಕೆ,** ವಿಧಾನ ಮಂಡಲದಲ್ಲಿ ಇಂದು, ಬೆಂಗಳೂರು ಪ್ರಾದೇಶಿಕ ಸುದ್ದಿ ವಿಭಾಗ, ಪ್ರಸ್ತುತ ಪಡಿಸಲಿದೆ.

<><><>

**ಇಂದು ಆರಂಭವಾಗಲಿರುವ,** ವಿಧಾನಮಂಡಲ ಅಧಿವೇಶನದಲ್ಲಿ, ಸದನದಲ್ಲಿ ಚರ್ಚೆಯಾಗಬೇಕಿರುವ ವಿಷಯಗಳ ಕುರಿತು, ಸರ್ಕಾರದೊಂದಿಗೆ ಸಮಾಲೋಚಿಸಿದ್ದಾಗಿ, ಬಿ.ಜೆ.ಪಿ. ರಾಜ್ಯಾಧ್ಯಕ್ಷ, ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ, ಬಿ.ಜೆ.ಪಿ., ಜೆ.ಡಿ.ಎಸ್. ಸಮನ್ವಯ ಸಮಿತಿ ಸಭೆಯ ಬಳಿಕ,ಮಾತನಾಡಿದ ಅವರು, 15 ರಿಂದ 20 ದಿನಗಳ ಕಾಲ, ಸದನ ನಡೆಸಲು, ಆಗ್ರಹಿಸಲಾಗಿತ್ತು. ಕೇವಲ 8 ರಿಂದ 9 ದಿನಗಳಿಗೆ ಸೀಮಿತಗೊಳಿಸಿದ್ದು, ಸರಿಯಲ್ಲ ಎಂದು, ಅವರು ಅಸಮಾಧಾನ ವ್ಯಕ್ತ ಪಡಿಸಿದರು. ವಿಧಾನಸಭೆ ವಿಪಕ್ಷ ನಾಯಕ, ಆರ್.ಅಶೋಕ, ಇದ್ದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ** ಅವರು, ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಹಸಿರು ಧ್ವಜ ತೋರಿದ, ಬೆಂಗಳೂರು – ಬೆಳಗಾವಿ ವಂದೇ ಭಾರತ್ ಎಕ್ಸ್‌ಪ್ರೆಸ್ ನೂತನ ರೈಲು, ಬೆಂಗಳೂರಿನಿಂದ ಮಧ್ಯಾಹ್ನ 2 ಗಂಟೆ 20 ನಿಮಿ 'ಕ್ಕೆ ಹೊರಟು, ರಾತ್ರಿ 8.30ಕ್ಕೆ, ಬೆಳಗಾವಿ ರೇಲ್ವೆ ನಿಲ್ದಾಣ ತಲುಪಿದೆ. ಸಂಸದ ಜಗದೀಶ್ ಶೆಟ್ಟರ್, ಈರಣ್ಣ ಕಡಾಡಿ, ಮಹಾಪೌರ ಮಂಗೇಶ ಪವಾರ ಸೇರಿದಂತೆ, ಅನೇಕ ಗಣ್ಯರು ಭವ್ಯ ಸ್ವಾಗತ ಕೋರಿದರು.

<><><>

**ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡದ** ಸಾಂಪ್ರದಾಯಿಕ ಖಣಗಳಿಗೆ, ಭೌಗೋಳಿಕ ಸೂಚ್ಯಂಕ ಮಾನ್ಯತೆ, ಗ್ಲೋಬಲ್ ಐಡೆಂಟಿಫಿಕೇಷನ್, ಜಿ.ಐ. ಟ್ಯಾಗ್ ದೊರೆತಿದೆ. ಖಣ ನೇಯುವ ಕೈಮಗ್ಗ ನೇಕಾರರಿಗೆ, ಬದುಕು ಕಟ್ಟಿ ಕೊಟ್ಟಿರುವ ರೇಷ್ಮೆ ಖಣಗಳು, ತಯಾರಿಕೆಯಲ್ಲಿ ನಾವಿನ್ಯತೆ ಕೊರತೆಯಿಂದ, ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದೇ, ಮೂಲೆ ಸೇರುವಂತಾಗಿತ್ತು. ಕೇಂದ್ರ ಹಾಗೂ ರಾಜ್ಯದ ಜವಳಿ ಇಲಾಖೆಗಳು, ಬೆಂಗಳೂರಿನ ನೇಕಾರ ಸೇವಾ ಕೇಂದ್ರ, ಕೈಮಗ್ಗ ನೇಕಾರರಿಗೆ ವಿಶೇಷ ತರಬೇತಿ ನೀಡಿ, ವಿನ್ಯಾಸ ಬದಲಿಸಿ, ಗುಳೇದಗುಡ್ಡದ ಕೈಮಗ್ಗದ ಖಣಗಳಿಗೆ ಹೊಸ ರೂಪ ನೀಡುವಲ್ಲಿ, ಯಶಸ್ವಿಯಾಗಿವೆ.

ಈ ಕುರಿತು ಒಂದು ವರದಿ:

***ಸಾಂಪ್ರದಾಯಿಕ ಕೈಮಗ್ಗ ನೇಕಾರಿಕೆ ಹಾಗೂ ದೇಸಿ ವಸ್ತ್ರ ಪರಂಪರೆ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ, ಇಂದು ಕೈಮಗ್ಗಗಳ ದಿನ ಆಚರಿಸಲಾಗುತ್ತಿದೆ.***

***ಕಳೆದ 7ನೇ ತಾರೀಖು ಹೊಸದಿಲ್ಲಿಯ ಭಾರತ ಮಂಟಪಂನಲ್ಲಿ ಜರುಗಿದ, ರಾಷ್ಟ್ರೀಯ ಕೈಮಗ್ಗ ದಿನಾಚರಣೆಯಲ್ಲಿ, ಗುಳೇದಗುಡ್ಡದ ಸಾಂಪ್ರದಾಯಿಕ ಖಣ, ವಿಶೇಷ ಹಾಗೂ ಆಕರ್ಷಕ ವಿನ್ಯಾಸದಲ್ಲಿ ಪ್ರದರ್ಶನಗೊಂಡು, ಅಂತಾರಾಷ್ಟ್ರೀಯ ಮಟ್ಟದಲ್ಲಿ ವಸ್ತ್ರ ವಿನ್ಯಾಸಕರ ಗಮನ ಸೆಳೆದವು.***

***ತೆರೆಮರೆಗೆ ಸರಿದಿದ್ದ, ಗುಳೇದಗುಡ್ಡದ ಖಣಗಳಿಗೆ, ಹೊಸ ಜೀವಕಳೆ ಈ ಮೂಲಕ ತುಂಬಲಾಯಿತು. ವಿನೂತನ ಫೈಲ್, ಡೈರಿ, ಕುರ್ತಾ, ಜಾಕೇಟ್, ದುಪಟ್ಟಾ, ಟೋಪಿ, ದಿವಾನ್ ಸೆಟ್ ಹಾಗೂ ಬಾಗಿಲು–ಕಿಟಕಿ ಪರದೆ ಸೇರಿದಂತೆ, ಹಲವು ರೀತಿಯಲ್ಲಿ ಮಾರುಕಟ್ಟೆಗೆ ಹೊಸ ವಿನ್ಯಾದಲ್ಲಿ ಪರಿಚಯಿಸಿ, ಅನ್ಯ ರಾಷ್ಟ್ರಗಳಿಗೆ ರಫ್ತಿಗೂ ಅವಕಾಶ ಸೃಷ್ಟಿಸಲು, ವೇದಿಕೆ ಸಿದ್ಧಗೊಂಡಿತು.***

*ಮೂಲತಃ ನೇಕಾರ ಕುಟುಂಬದಿಂದ ಬಂದ, ಟೆಕ್ಸ್‌ಟೈಲ್ ಟೆಕ್ನಾಲಜಿ ಇಂಜಿನೀಯರಿಂಗ್ ಪದವಿಧರ, ಗುಳೇದಗುಡ್ಡದ ರವೀಂದ್ರ ಜಿಡಗಿ, ಪ್ರಸ್ತುತ ಹಲವು ಕೈಮಗ್ಗ ನೇಕಾರರಿಗೆ ಮುದ್ರಾ ಯೋಜನೆಯಡಿ, ಸಾಲ ಸೌಲಭ್ಯ ಪಡೆಯಲು ಹಾಗೂ ಗುಳೇದಗುಡ್ಡದ ಖಣಕ್ಕೆ ಮರುಜೀವ ನೀಡಲು, ಸಮಾನ ಮನಸ್ಕ ಗೆಳೆಯರೊಂದಿಗೆ ಶ್ರಮಿಸುತ್ತಿದ್ದಾರೆ.*

*ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಕೈಮಗ್ಗದ ನವೋದ್ಯಮಿ, ರವೀಂದ್ರ ಜಿಡಗಿ.*

<><><>

**ವಿವೇಕ (50) + ರವೀಂದ್ರ ಜಿಡಗಿ ಧ್ವನಿ (50) ಸೆಕೆಂದುಗಳು**

<><><>

**ಈಗ ಪ್ರಕಟಣೆ,**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(1 ನಿ. 15 ಸೆ.)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ಹುಬ್ಬಳ್ಳಿ, ಧಾರವಾಡ ಸೆಂಟ್ರಲ್** ವಿಧಾನಸಭಾ ಕ್ಷೇತ್ರದ, ಗೋಪನಕೊಪ್ಪದಲ್ಲಿ 'ಹರ್ ಘರ್ ತಿರಂಗಾ' ಅಭಿಯಾನದ ಕುರಿತು, ಜನ ಜಾಗ್ರತಿ ದ್ವಿಚಕ್ರ ವಾಹನ ಜಾಥಾಕ್ಕೆ, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, 79ನೇ ಸ್ವಾತಂತ್ರ್ಯ ಸಂಭ್ರಮದ ಹಿನ್ನೆಲೆ, ಪ್ರತಿ ಮನೆ ಮನೆಯಲ್ಲೂ, ತ್ರಿವರ್ಣ ಧ್ವಜ ಹಾರಿಸುವ ಮೂಲಕ, ದೇಶಾಭಿಮಾನ ಮೆರೆಯಲು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕರೆ ನೀಡಿದ್ದಾರೆ. ದೇಶಭಕ್ತಿಯ ಸುಂದರ ಅನುಭೂತಿಗೆ, ಎಲ್ಲರೂ ಸಾಕ್ಷಿಯಾಗೋಣ ಎಂದರು. www.harghartiranga.com ನಲ್ಲಿ ಹೆಸರು ನೋಂದಾಯಿಸಿ, ತ್ರಿವರ್ಣ ಧ್ವಜದ ಜೊತೆ, ತಮ್ಮ ಭಾವಚಿತ ಅಪ್‌ಲೋಡ್ ಮಾಡುವಂತೆ, ಕೋರಿದರು.

<><><>

**ಹರ್ ಘರ್ ತಿರಂಗಾ ಅಭಿಯಾನದ,** ಸ್ವಯಂಸೇವಕ, ಧಾರವಾಡದ ಯುವ ಖಾದಿ ವಸ್ತ್ರೋದ್ಯಮಿ, ಖಾದಿ ಹಾಗೂ ಹತ್ತಿ ಬಟ್ಟೆಯಲ್ಲಿ ಧ್ವಜಗಳನ್ನು ರೂಪಿಸಿ, ಸಾರ್ವಜನಿಕರಿಗೆ ಒದಗಿಸುವಲ್ಲಿ, ಶ್ರಮ ವಹಿಸಿದ್ದಾರೆ, ವಸ್ತ್ರ ಕುಟಿಯ, ಕಮಲಾ ಹಾಗೂ ಚೇತನ ದೇಶಪಾಂಡೆ, ದಂಪತಿ. ಈ ಬಾರಿ, ಪ್ಲಾಸ್ಟಿಕ್ ಧ್ವಜಗಳನ್ನು ಸಂಪೂರ್ಣ ವರ್ಜಿಸುವಂತೆ, ಪ್ರದೇಶ ಸಮಾಚಾರದ ಮೂಲಕ, ಮನವಿ ಮಾಡಿದ್ದಾರೆ, ಚೇತನ ದೇಶಪಾಂಡೆ.

<><><>

**ಚೇತನ ದೇಶಪಾಂಡೆ 37 ಸೆಕೆಂದುಗಳು**

<><><>

**ಹಾವೇರಿ, ಬಳ್ಳಾರಿ ಹಾಗೂ ವಿಜಯನಗರ** ಜಿಲ್ಲೆಗಳ, ಅಚ್ಚುಕಟ್ಟು ಪ್ರದೇಶ ವ್ಯಾಪ್ತಿ ಹೊಂದಿರುವ, ವರದಾ ನದಿ ಹಾಗೂ ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಹರಿಯುವ, ಬೇಡ್ತಿ ನದಿ ಜೋಡಣೆ ಯೋಜನೆ ಕುರಿತು, ಕಾರ್ಯಸಾಧ್ಯತೆ ವರದಿ ಸಿದ್ಧವಾಗಿದೆ ಎಂದು, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ತಿಳಿಸಿದ್ದಾರೆ. ಹಾವೇರಿಯಲ್ಲಿ ಏರ್ಪಡಿಸಿದ್ದ, ವರದಾ ಹಾಗೂ ಬೇಡ್ತಿ ನದಿಗಳ ಜೋಡಣೆ, ಚಿಂತನಾ ಸಭೆಯಲ್ಲಿ, ಅವರು ಮಾತನಾಡಿದರು. ಉತ್ತರಕನ್ನಡ ಜಿಲ್ಲೆ ಪರಿಸರಕ್ಕೆ ಹಾನಿಯಾಗದು. 26 ಟಿ.ಎಂ.ಸಿ. ಅಡಿ ನೀರನ್ನು ಸದ್ಬಳಕೆ ಮಾಡಿಕೊಳ್ಳಬಹುದು, ಎಂದು ಸಂಸದ ಬೊಮ್ಮಾಯಿ, ನುಡಿದರು. ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ ಹಾಗೂ ಕೇಂದ್ರ ಜಲಶಕ್ತಿ ಸಚಿವಾಲಯದ, ರಾಜ್ಯ ಖಾತೆ ಸಚಿವ, ವಿ.ಸೋಮಣ್ಣ ಅವರೊಂದಿಗೆ, ಸಮಾಲೋಚಿಸಿದ್ದು, ಮುಂಬರುವ ಒಂದು ವಾರದಲ್ಲಿ, ಸಕಾರಾತ್ಮಕ ಪ್ರತಿಕ್ರಿಯೆಯ ನಿರೀಕ್ಷೆ ಇದೆ ಎಂದರು.

<><><>

**'ನಿಪುಣ ಕರ್ನಾಟಕ' ಯೋಜನೆ ಅಡಿ,** 'ಸ್ಟೆಮ್' ಅಭ್ಯರ್ಥಿಗಳಿಗೆ, ಕಲಬುರಗಿಯ ಶೆಟ್ಟಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯಲ್ಲಿ, ಸೈಕೋಮೆಟ್ರಿಕ್ ಹಾಗೂ ಟೆಕ್ನಿಕಲ್ ಅಸೆಸ್ಮೆಂಟ್, ಆನ್‌ಲೈನ್ ಮೌಲ್ಯಮಾಪನ ಯಶಸ್ವಿಯಾಗಿ ಜರುಗಿತು. 500ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿದ್ದರು. ರಾಜ್ಯದ 2 ಮತ್ತು 3ನೇ ಹಂತದ ನಗರಗಳಲ್ಲಿ, ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಪದವಿಧರರಿಗೆ ಆದ್ಯತೆ ನೀಡಿ, ಪ್ರಾಯೋಗಿಕವಾಗಿ ಕಲಬುರಗಿಯಲ್ಲಿ, ಮೊದಲ ಬಾರಿಗೆ, ಮೌಲ್ಯಮಾಪನ ಪರೀಕ್ಷೆ ನಡೆಸಲಾಯಿತು. 'ಪರೀಕ್ಷೆ ಮೂಲಕ ಅವರ ಕೌಶಲ ಕೊರತೆಯನ್ನು ಪತ್ತೆ ಹಚ್ಚಿ, ಔದ್ಯೋಗಿಕ ಕ್ಷೇತ್ರ ಬಯಸುವ, ಅಗತ್ಯ ಕೌಶಲ ತರಬೇತಿ ನೀಡಿ, ಸಿದ್ಧಗೊಳಿಸುವ ಉದ್ದೇಶ, ನಿಪುಣ ಕರ್ನಾಟಕ ಯೋಜನೆ, ಹೊಂದಿದೆ' ಎಂದು, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ ಹಾಗೂ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವ, ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ.

<><><>

**ಅದ್ವೈತ ಸಿದ್ಧಾಂತ ಪ್ರತಿಪಾದಕ,** ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ಅವರ, 96ನೇ ಪುಣ್ಯಸ್ಮರಣೆ ಅಂಗವಾಗಿ, ಶ್ರೀ ಮಠದಲ್ಲಿ ಆಯೋಜಿಸಿದ್ದ, ಶಿವನಾಮ ಸುಪ್ತಾಹ, ಆರೂಢ ಮಹಿಮೆ ಪ್ರವಚನ ಕಾರ್ಯಕ್ರಮ, ಅದ್ದೂರಿ ಜಲ ರಥೋತ್ಸವದೊಂದಿಗೆ, ಸಂಪನ್ನಗೊಂಡಿತು. ಪೂಜ್ಯರ ಜನ್ಮಸ್ಥಳ ಬೀದರ ಜಿಲ್ಲೆ, ಚಳಕಾಪುರದಿಂದ ಹಿಡಿದು, ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ್ದ, ಲಕ್ಷಾಂತರ ಭಕ್ತರು, ಆರಾಧನೆಯಲ್ಲಿ ಪಾಲ್ಗೊಂಡರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಇಂದಿನಿಂದ 22ರ ವರೆಗೆ,** ವಿಧಾನಮಂಡಲದ ಮುಂಗಾರು ಅಧಿವೇಶನ; 24ಕ್ಕೂ ಹೆಚ್ಚು ಮಸೂದೆಗಳ ಮಂಡನೆ.
- **ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡದ** ಖಣಗಳಿಗೆ, ಭೌಗೋಳಿಕ ಸೂಚ್ಯಂಕ ಮಾನ್ಯತೆ.
- **ವರದಾ ಹಾಗೂ ಬೇಡ್ತಿ ನದಿ ಜೋಡಣೆ** ಯೋಜನೆ; ಕಾರ್ಯಸಾಧ್ಯತೆ ವರದಿ ಸಿದ್ಧ.
- **'ನಿಪುಣ ಕರ್ನಾಟಕ' ಯೋಜನೆ;** 'ಸ್ಟೆಮ್' ಅಭ್ಯರ್ಥಿಗಳಿಗೆ, ಕಲಬುರಗಿಯಲ್ಲಿ, ಕೌಶಲ ಪರೀಕ್ಷೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>